**CC 862/2020**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 862/2020

**ಸಿ ಡಬ್ಲೂ** 7
**ಪಿ ಡಬ್ಲೂಃ** 5

| | |
|---|---|
| **ಸಾಕ್ಷಿಯ ಹೆಸರು -** | **ಜಗದೀಶ** |
| **ತಂದೆಯ ಹೆಸರು -** | **ಗೋಣಿ ಬಸಪ್ಪ** |
| **ವಯಸ್ಸು -** | 48 **ವರ್ಷಗಳು** |
| **ಉದ್ಯೋಗ -** | **ಮುಖ್ಯ ಪೇದೆ, ಪಟ್ಟಣ ಪೋ. ಠಾ** |
| **ವಾಸಸ್ಥಳ -** | **ಹೊಸಪೇಟೆ** |

**ಸಾಕ್ಷಿಯನ್ನು ದಿನಾಂಕಃ** 21-06-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು ದಿಃ **19-04-2021** ರಿಂದ ಇಲ್ಲಿಯವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪೇದೆ ಮತ್ತು ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ **02-07-2022** ರಂದು ನನ್ನನ್ನು ಪಾದಗಟ್ಟೆ ಆಂಜನೇಯ ದೇವಸ್ಥಾನದ ಬಳಿ ಬಂದೋಬಸ್ತ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಸದರಿ ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ರಾಜಸ್ಥಾನದ ಕನ್ನಯ್ಯ ಲಾಲ್ ಎಂಬುವವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಹೊಸಪೇಟೆಯ ಶ್ರೀ ರಾಮ ಸೇನೆ ಘಟಕದವರು ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಂಡಿದ್ದರು. ಸದರಿ ದೇವಸ್ಥಾನದ ಎದುರಿಗೆ ಸಂಬಂಧ ಪಟ್ಟ ಇಲಾಖೆಗಳಿಂದ ಪೂರ್ನಾನುಮತಿ ಪಡೆಯದೇ ಸ್ಟೇಜ್ ವೊಂದನ್ನು ಹಾಕಿದ್ದರು. ಚಾಸಾ **-1** ರವರೊಂದಿಗೆ ನಾನು ಸ್ಥಳಕ್ಕೆ ಹೋಗಿ ಸ್ಟೇಜ್ ತೆರವುಗೊಳಿಸಲು ಆರೋಪಿತರಿಗೆಲ್ಲಾ ತಿಳಿಸಿದ್ದೇವು.

ಆರೋಪಿತರು ಸ್ಟೇಜ್ ತೆಗೆಯುವುದಿಲ್ಲ ಅದೇ ಸ್ಥಳದಲ್ಲಿ ಪ್ರತಿಭಟನೆ ಮಾಡುತ್ತೇವೆ ಎಂದು ತಿಳಿಸಿದರು. ಆರೋಪಿತರು ಪೂರ್ವಾನುಮತಿ ಪಡೆಯದೇ ಧ್ವನಿ ವರ್ಧಕಗಳನ್ನು ಸಹ ಉಪಯೋಗಿಸುತ್ತಿದ್ದರು. ಸದರಿಯವರು ಆ ರೀತಿ ಸ್ಟೇಜ್ ಹಾಕಿದ್ದರಿಂದ ಮತ್ತು ಧ್ವನಿ ವರ್ಧಕಗಳನ್ನು ಉಪಯೋಗಿಸಿದ್ದರಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಿತ್ತು. ಚಾಸಾ -1 ರವರು ಸದರಿ ಸ್ಟೇಜ್ ಮತ್ತು ಧ್ವನಿ ವರ್ಧಕಗಳನ್ನು ತೆರವುಗೊಳಿಸಿ ಠಾಣೆಗೆ ಹಿಂತಿರುಗಿ ದೂರನ್ನು ನೀಡಿರುತ್ತಾರೆ. ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 4 ರಿಂದ 6 ನೇ ಆ್ರೋಪಿತರು ಗೈರು ಹಾಜರು ಇದ್ದು, ಅವರ ಗುರುತಿಸುವಿಕೆಗೆ ತಕರಾರು ಇಲ್ಲಾ ಎಂದು ಅವರ ಪರ ವಕೀಲರು ತಿಳಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಎಸ್ ಹೆಚ್., ವಕೀಲರಿಂದ</u>**

ನನಗೆ ಆ ದಿನ ಬೆಳಿಗ್ಗೆ 08.00 ರಿಂದ ಬೆಳಿಗ್ಗೆ 11.00 ಗಂಟೆಯವರೆಗೆ ಪಾದಗಟ್ಟೆ ಆಂಜನೇಯ ದೇವಸ್ಥಾನದ ಬಳಿ ಬಂದೋಬಸ್ತ ಕರ್ತವ್ಯಕ್ಕೆ ನೇಮಿಸಿದ್ದರು. ಆರೋಪಿತರು ಸ್ಟೇಜ್ ನ್ನು ಬೆಳಿಗ್ಗೆ 08.00 ರಿಂದ 08.30 ರ ಸಮಯದಲ್ಲಿ ಆರೋಪಿತರು ನನ್ನ ಸಮಕ್ಷಮವೇ ಸ್ಟೇಜ್ ಹಾಕಿರಲಿಲ್ಲ. ಸಾಕ್ಷಿ ಮುಂದುವರೆದು ನಾನು ಹೋಗುವಷ್ಟರಲ್ಲಿಯೇ ಹಾಕಿದ್ದರು ಎಂದು ನುಡಿಯುತ್ತಾರೆ. ಸದರಿ ಸ್ಟೇಜ್‌ನ ಉದ್ದಗಲ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಆರೋಪಿತರು ಸ್ಟೇಜ್ ಹಾಕಿದಾಗ ಸ್ಥಳದಲ್ಲಿ ಇದ್ದರು. ಆರೋಪಿತರು ಯಾವ ರೀತಿಯ ಮತ್ತು ಯಾವ ಬಣ್ಣದ ಬಟ್ಟೆಗಳನ್ನು ಧರಿಸಿದ್ದರು ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಪ್ರತಿಭಟನೆಗೆ ಸುಮಾರು 150-200 ಜನ ಸೇರಿದ್ದರು. ನನ್ನ ಹೇಳಿಕೆಯಲ್ಲಿ 150-200 ಜನ ಪ್ರತಿಭಟನಾಕಾರರು ಇದ್ದರು ಎಂದು ಬರೆಸಿರುವುದಿಲ್ಲ.

**CC 862/2020**

**ಸಿ ಡಬ್ಲೂ 7**
**ಪಿ ಡಬ್ಲೂ: 5**

ಕೃತ್ಯ ಸ್ಥಳ ಯಾವಾಗಲೂ ಜನದಟ್ಟಣೆಯಿಂದ ಕೂಡಿರುವ ಸ್ಥಳ ಅಂದರೆ ಸರಿ. ಕೃತ್ಯ ಸ್ಥಳದಲ್ಲಿ 3 ರಸ್ತೆಗಳು ಸೇರುತ್ತವೆ ಅಂದರೆ ಸರಿ. ಆ ದಿನ ಅಂಗಡಿ ಮುಗ್ಗಟ್ಟುಗಳೆಲ್ಲಾ ತೆರೆದಿದ್ದವು ಮತ್ತು ವಾಹನಗಳೆಲ್ಲ ಓಡಾಡುತ್ತಿದ್ದವು ಅಂದರೆ ಸರಿ.

ಸ್ಥಳಕ್ಕೆ ಯಾವ ಮೇಲಾಧಿಕಾರಿ ಬಂದಿದ್ದರು ಎಂದು ಹೇಳಿಕೆಯಲ್ಲಿ ಬರೆಸಿಲ್ಲ ಅಂದರೆ ಸರಿ. ಆ ದಿನ ನಾನು ಸದರಿ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಿಲ್ಲ ಅಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಆರೋಪಿತರು ಸ್ಥಳದಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಸ್ಥಳದಲ್ಲಿ ಆರೋಪಿತರು ಯಾವುದೇ ಸ್ಟೇಜ್ ಹಾಕಿರಲಿಲ್ಲ ಮತ್ತು ಧ್ವನಿ ವರ್ಧಕಗಳನ್ನು ಇಟ್ಟಿರಲಿಲ್ಲ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.